ತಮಿಳುನಾಡಿನ ನಾಯನಾರ್ ಸಂತರು – ೧೩

# ತಿರುಮಳಿಸ್ಸೈ ಆಳ್ವಾರ್

ಕಥೆ : ಆರ್.ವಿ.

ಚಿತ್ರ : ಶಂಕರ್

1 ತಿರುಮಳಿಸ್ಸೆ ಆಳ್ವಾರರು ಕಾಂಚೀಪುರಂ ಜಿಲ್ಲೆಯ ತಿರುವೇರ್ಕ್ಕ ಎಂಬಲ್ಲಿ ವಾಸವಾಗಿದ್ದರು. ಕಣಿಕಣ್ಣನ್ ಎಂಬ ಶಿಷ್ಯ ಅವರೊಂದಿಗಿದ್ದ.




2 ಒಬ್ಬಾಕೆ ವೃದ್ಧೆ ಆಳ್ವಾರರ ಮಹಿಮೆಯನ್ನು ಕೇಳಿದ್ದಳು. ಅವರು ಕುಳಿತುಕೊಳ್ಳುವ ಸ್ಥಳವನ್ನು ಆಕೆ ಗುಡಿಸಿ, ರಂಗವಲ್ಲಿ ಹಾಕಿ ಸ್ವಚ್ಛವಾಗಿ ಓರಣವಾಗಿ ಇಡುತ್ತಿದ್ದಳು.



3 ಆ ಹೆಂಗಸಿನ ಸೇವೆಯಿಂದ ಆಳ್ವಾರರಿಗೆ ಸಂತೋಷವಾಯಿತು.




4 ಒಂದು ದಿನ ಕಾಂಚಿಯ ಪಲ್ಲವ ರಾಜನು ಆನೆಯ ಮೇಲೆ ಮೆರವಣಿಗೆ ಹೋಗುತ್ತಿದ್ದ. ತರುಣಿಯಾಗಿದ್ದ ಹೆಂಗಸು ಮಹಡಿಯ ಮೇಲಿನಿಂದ ಅವನನ್ನು ನೋಡಿದಳು. ರಾಜನು ಅವಳನ್ನು ನೋಡಿದ.



5 ಅನಂತರ ರಾಜನು ತನ್ನ ದೂತರನ್ನು ಕಳುಹಿಸಿ, ಅವಳ ಒಪ್ಪಿಗೆ ಪಡೆದು, ಅವಳನ್ನು ಮದುವೆಯಾದ. ಕೆಲವು ವರ್ಷಗಳ ನಂತರ...




6
ರಾಜನು ಕಣಿಕಣ್ಣನನ್ನು ಕರೆಸಿ, ಅವನನ್ನು ಸತ್ಕಾರಗಳೊಂದಿಗೆ ಬರಮಾಡಿಕೊಂಡ.
ಆಳ್ವಾರರ ಪ್ರಿಯ ಶಿಷ್ಯರೇ! ತಮ್ಮಲ್ಲೊಂದು ಕೋರಿಕೆ. ತಮ್ಮ ಗುರುಗಳನ್ನೊಮ್ಮೆ ಹೇಗಾದರೂ ಒಪ್ಪಿಸಿ ಅರಮನೆಗೆ ಕರೆತರಬೇಕು.
ಓ ರಾಜ! ಅದು ಮಾತ್ರ ಸಾಧ್ಯವಿಲ್ಲ. ದೇವಾಲಯಕ್ಕಲ್ಲದೆ ನನ್ನ ಗುರುಗಳು ಬೇರೆ ಎಲ್ಲಿಗೂ ಹೋಗಲಾರರು.
7
ಅದರಿಂದೇನು? ಗುರುಗಳ ಕೃಪೆ ನಿಮ್ಮ ಮೇಲೆ ಸಂಪೂರ್ಣ ಆಗಿರಬೇಕು. ನನಗೆ ಯೌವನ ಮತ್ತೆ ಮರಳುವಂತೆ ನೀವು ಒಂದು ಮಂತ್ರ ಹೇಳಿಬಿಡಿ.
ಮಹಾರಾಜ, ದಯವಿಟ್ಟು ಕ್ಷಮಿಸು. ಭಗವಂತನನ್ನು ಸ್ತುತಿಸುವ ನಾಲಿಗೆ ನರಮಾನವನನ್ನು ಸ್ತುತಿಸಬಾರದು.
8
ಅದಕ್ಕೆ ಪ್ರತಿಯಾಗಿ ರಾಜ ಹೇಳಿದ – ಈ ಭೂಮಿಯನ್ನಾಳುವ ರಾಜನೂ ನಾರಾಯಣನ ಒಂದು ಅಂಶವೇ ಆಗಿದ್ದಾನೆ. ಆದ್ದರಿಂದ ನನ್ನ ಸ್ತುತಿ ಮಾಡುವುದರಿಂದ ದೋಷವೇನು?
ಅದಕ್ಕೆ ಸಮ್ಮತಿಸಿದ ಕಣಿಕಣ್ಣನ್ ಒಂದು ಸ್ತೋತ್ರವನ್ನು ಹಾಡಿದ.
ನನ್ನನ್ನು ಸ್ತುತಿಸುವ ಬದಲು ನೀವು ದೇವಾಲಯದ ದೇವರನ್ನು ಸ್ತುತಿಸುತ್ತಿರುವಿರಲ್ಲಾ? 'ನಾಗರಾಜನ ಮೇಲೆ ಮಲಗಿರುವ ದೇವರು ನಿಂತುಕೊಂಡ, ಕುಳಿತುಕೊಂಡ, ಮತ್ತೆ ಮಲಗಿ ಕೊಂಡ', ಎಂದು ಹಾಡುತ್ತೀರಿ!
ರಾಜ, ದೇವರನ್ನು ಸ್ತುತಿಸಿದರೆ ನಿನ್ನನ್ನೇ ಸ್ತುತಿಸಿದಂತಾಯಿತಲ್ಲ! ನೀನು ದೇವರ ಇನ್ನೊಂದು ಅಂಶ ತಾನೇ ?
9
ರಾಜ ಕೆಂಡಮಂಡಲನಾದ.
ನೀನು ನನ್ನ ಆಜ್ಞೆಯನ್ನು ಮೀರಿರುವೆ. ನನ್ನ ಬಗ್ಗೆ ಸ್ತುತಿ ಮಾಡಲಿಲ್ಲ. ಆದ್ದರಿಂದ ನೀನು ನನ್ನ ರಾಜ್ಯದಲ್ಲಿರಬಾರದು. ಈ ಕೂಡಲೇ ಈ ಪಟ್ಟಣದಿಂದ ಹೊರಗೆ ಹೋಗು.
ರಾಜ, ನಾನು ಹೊರಟುಹೋಗುತ್ತೇನೆ. ದೇವರು ಮಲಗುವುದು, ನಿದ್ರಿಸುವುದು ನಿನ್ನ ಪಟ್ಟಣದ ದೇವಾಲಯದಲ್ಲಿ ಮಾತ್ರವೇ ಅಲ್ಲವಲ್ಲ ?
10
ಕಣಿಕಣ್ಣನ್ ಅರಮನೆಯಲ್ಲಿ ನಡೆದದ್ದನ್ನೆಲ್ಲ ಆಳ್ವಾರರಿಗೆ ತಿಳಿಸಿದ.
ಗುರುಗಳೆ, ನಾನು ಪಟ್ಟಣ ತೊರೆದು ಹೋಗುತ್ತಿದ್ದೇನೆ. ದಯವಿಟ್ಟು ಹೊರಡಲು ಅಪ್ಪಣೆ ಕೊಡಿ.
ಕಣಿಕಣ್ಣಾ, ನೀನು ಹೋಗುವುದಾದರೆ ನಾನೇಕೆ ಇಲ್ಲಿರಬೇಕು? ನಾನು ದೇವಾಲಯಕ್ಕೆ ಹೋಗಿ, ದೇವರನ್ನು ಎಚ್ಚರಿಸಿ, ನನ್ನೊಂದಿಗೆ ಅವನನ್ನೂ ಕರೆತರುತ್ತೇನೆ.

11 ಹೀಗೆಂದ ಅವನು ದೇವಾಲಯವನ್ನು ಪ್ರವೇಶಿಸಿ, ದೇವರ ಮುಂದೆ ನಿಂತು ಹಾಡತೊಡಗಿದ:




12 ಆಳ್ವಾರ್ ಹಾಡಿ ಮುಗಿಸಿದ ಕೂಡಲೇ ಭಗವಂತ ತನ್ನ ಹಾವಿನ ಹಾಸಿಗೆಯನ್ನು ಸುತ್ತಿ, ಅವನ ಹಿಂದೆಯೇ ಹೊರಟ.



13 ಪಟ್ಟಣದಿಂದ ಹೊರಗೆ ಒಂದು ಉದ್ಯಾನದಲ್ಲಿ ಅವರು ಮೂವರೂ ತಂಗಿದರು.



14 ಪಟ್ಟಣದ ಬೇರೆ ದೇವಾಲಯದಲ್ಲಿದ್ದ ದೇವತೆಗಳೂ ಅಲ್ಲಿಂದ ಹೊರಟರು. ಪಟ್ಟಣವೆಲ್ಲ ಜಡವಾಯಿತು. ಸೂರ್ಯನೂ ಅಲ್ಲಿಂದ ಹೊರಟ. ಇಡೀ ಪಟ್ಟಣವೇ ಕತ್ತಲೆಯಲ್ಲಿ ಮುಳುಗಿತು.





15
ರಾಜನಿಗೆ ತನ್ನ ತಪ್ಪಿನ ಅರಿವಾಯಿತು. ಅವನು ಚಿಂತೆಗೊಳಗಾದ. ತನ್ನ ಮಂತ್ರಿಯೊಂದಿಗೆ ಅವನು ಆಳ್ವಾರ್ ತಂಗಿದ್ದ ಉದ್ಯಾನಕ್ಕೆ ಹೋದ. ಅಲ್ಲಿ ಕಣಿಕಣ್ಣನ್ ಕಾವಲಾಗಿ ನಿಂತಿದ್ದ.
ಭಗವಂತನ ಸೇವಕರೇ! ನಾನು ಅಹಂಕಾರದಿಂದ ಆಲೋಚಿಸದೆ ಮಾತನಾಡಿದೆ. ದಯವಿಟ್ಟು ನನ್ನನ್ನು ಕ್ಷಮಿಸಿ. ಪಟ್ಟಣಕ್ಕೆ ಮರಳಿ ಬರಬೇಕು.
16
ಕಣಿಕಣ್ಣನ್ ಪ್ರಾರ್ಥನೆ ಮಾಡಿಕೊಂಡಾಗ, ಆಳ್ವಾರ್ ದೇವರನ್ನು ಕುರಿತು ಒಂದು ಸ್ತೋತ್ರವನ್ನು ಹಾಡಿದರು.
ಭಗವಂತ! ರಾಜನಿಗೆ ತನ್ನ ತಪ್ಪಿನ ಅರಿವಾಗಿದೆ. ಅವನು ವಿನಯಪೂರ್ವಕವಾಗಿ ಇಲ್ಲಿಗೆ ಬಂದಿದ್ದಾನೆ. ಆದ್ದರಿಂದ ನಾವೆಲ್ಲ ನಗರಕ್ಕೆ ಹೋಗೋಣ. ನೀನು ನಿನ್ನ ಹಾವಿನ ಹಾಸಿಗೆಯನ್ನು ಬಿಡಿಸಿ, ಮೊದಲಿನಂತೆಯೇ ಅಲ್ಲಿ ಮಲಗಿ ವಿಶ್ರಮಿಸಿಕೊಳ್ಳಬಹುದು.
ಆಗಲಿ, ಹಾಗೇ ಮಾಡುತ್ತೇನೆ.
17
ಎಲ್ಲರೂ ಪಟ್ಟಣಕ್ಕೆ ಮರಳಿದರು. ಇತರ ದೇವತೆಗಳು ಅದೇ ರೀತಿ ಮರಳಿದರು. ಭಗವಂತ ದೇವಾಲಯಕ್ಕೆ ಮರಳಿದ ಕೂಡಲೇ ಪಟ್ಟಣದ ವೈಭವವೂ ಮರಳಿತು.
18
ಭಗವಂತನು ಹಿಂದಿನಂತೆಯೇ ದೇವಾಲಯದಲ್ಲಿ ಹಾವಿನ ಹಾಸಿಗೆಯಲ್ಲಿ ಮಲಗಿಕೊಂಡು ಎಲ್ಲರಿಗೂ ದರ್ಶನ ನೀಡಿದನು. ಅಂದಿನಿಂದ ಎಲ್ಲರೂ ದೇವರನ್ನು 'ನುಡಿದಂತೆ ನಡೆದ ದೇವರು' ಎಂದು ಕೊಂಡಾಡಿದರು.